

ನೀರು ತೆಗೆದು ಆತನ ಬಾಯಿಗೆ ಎತ್ತರದಿಂದಲೇ ಸುರಿದ. ಜೀವ ಬಂದಂತಾದ ಆ ಸಣಕಲು ದೇಹ ಮತ್ತೊಮ್ಮೆ ನರಳಿ ನಿಧಾನಕ್ಕೆ ಸುತ್ತೆಲ್ಲಾ ನೋಡಿದೆ. ನಿಂತಿದ್ದವರ ಮುಖದಲ್ಲಿ ಅಸಹನೆ ಸಿಟ್ಟುಗಳ ಕಂಡು ಮತ್ತಷ್ಟು ತಲೆ ತಗ್ಗಿಸಿ ನೆಲವನ್ನೇ ನಿಟ್ಟಿಸುತ್ತಾ ನಿಂತ. ಮೊಕ್ತೇಸರರು "ಬೊಗಳು ಬೇವಾರ್ಸಿ, ಏನಾಗಿತ್ತು ನಿನಗೆ".

ಕೈಕಾಲುಗಳು ನಡುಗಲು ಶುರುವಾಗಿದೆ ಬಡ ಜೀವಕ್ಕೆ. ಆತ ಮೆಲ್ಲಗೆ "ಧನಿಗಳೇ, ನದಿಯನ್ನೊಮ್ಮೆ ನೋಡಿ ಬನ್ನಿ'' ಎಂದವನೇ ಚಿಕ್ಕ ಮಗುವಿನಂತೆ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ. ವಾಸನೆಗೂ ನದಿಗೂ ಏನೋ ನಂಟಿರಬೇಕೆಂದು ಕೆಲವರು ನದಿ ಪಕ್ಕಕ್ಕೆ ಇಳಿದಿದ್ದಾರೆ. ಸದಾ ನೈವೇದ್ಯ ತಿನ್ನಲು ಮುಗಿಬೀಳುತ್ತಿದ್ದ ಮೀನುಗಳ ಸತ್ತಿರುವುದನ್ನು ಕಂಡ ಅವರ ಅಂತಕರಣ ಕಲಕಿದೆ. ಅದೂ ಸತ್ತು ಬಾತುಕೊಂಡು ತೇಲಾಡುತ್ತಿದ್ದ ದೊಡ್ಡ ದೊಡ್ಡ ದೇವರ ಮೀನುಗಳು, ಹೊಳೆಗೆ ಇಳಿದವರೆ ಹಾವು ಕಂಡಂತೆ ಒಮ್ಮೆಗೆ "ಓ ಬನ್ನಿ ಎಲ್ಲಾ ಬನ್ನಿ" ಎಂದು ಬೊಬ್ಬೆ ಹೊಡೆದು ಕೂಗಿದ್ದಾರೆ.

ನಡೆದದ್ದು ಇಷ್ಟೇ. ನದಿ ಪೂರ್ಣ ಪ್ರಮಾಣದಲ್ಲಿ ಬತ್ತುವ ಹಂತದಲ್ಲಿತ್ತು. ಅಲ್ಲಿ ನೀರು ಸಣ್ಣಗೆ ಹರಿಯುತ್ತ ನದಿಯೊಳಗಿನ ಮರಳು ಕಲ್ಲು ಬಂಡೆಗಳೆಲ್ಲ ಎದ್ದು ನಿಂತಿದ್ದವು. ಸಣ್ಣ ಹರಿವು. ಇದೇ ಸಂದರ್ಭ ಬಳಸಿಕೊಂಡ ದುಷ್ಟನೊಬ್ಬ ತಾನು ನೆಟ್ಟಿದ ಗೇರು ಗಿಡಗಳಿಗೆ ಸಿಂಪಡಿಸಲು ತಂದಿದ್ದ ರಾಸಾಯನಿಕವನ್ನು ಮೀನು ಹಿಡಿಯಲು ನೀರಿಗೆ ಸುರಿದಿದ್ದಾನೆ. ನಂತರ ನಡೆದದ್ದು ಭೀಕರ ಹತ್ಯೆ. ಆ ನೀರಿನಲ್ಲಿ ಮೀನುಗಳು ಮೈಲುಗಟ್ಟಲೆ ದೂರದಿಂದ ಸಾಯುತ್ತಾ ಬಂದು ನದಿ ಪಾತ್ರವೆಲ್ಲಾ ಗಬ್ಬೆದ್ದಿದೆ ಎಂದೂ ಕಂಡು ಕೇಳರಿಯದ ದೃಶ್ಯ. ಮೊಕ್ತೇಸರರು "ಎಲ್ಲ ಬನ್ನಿ ಈಗ ಅವನನ್ನು ಬಿಡುವುದು ಒಳ್ಳೆಯದು. ನಾಳೆ ಸರಕಾರಕ್ಕೆ ಗೊತ್ತಾದರೆ ರಾಮಾಯಣ ಆಗುತ್ತದೆ''. ಎಲ್ಲರೂ ತೆಂಗಿನಮರದ ಬುಡಕ್ಕೆ ಬಂದಿದ್ದಾರೆ. ಚೋಂಗ ಈಗ ಎಲ್ಲರ ಕಣ್ಣೆತ್ತಿ ನೋಡಿದ್ದಾನೆ. ಕೆಲಸದವನೊಬ್ಬ ಅವನನ್ನ ಕಟ್ಟಿ ಹಾಕಿದ ಹಗ್ಗವನ್ನು ಬಿಚ್ಚುತ್ತಿದಂತೆ ಮತ್ತೆ ಅವನ ಗೊಣಗಾಟ ಕೇಳಿಸಿತು. "ಅವ ಏನು ಹೇಳುತ್ತಿದ್ದಾನೆ ಕೇಳಿ" ಎಂದರು ಭಟ್ರು. "ಅವ ಯಾರಿಗೋ ಬಯ್ಯುತ್ತಿದ್ದಾನೆ. ಅವರಿಗೆ ನನ್ನ ಶಾಪ ತಟ್ಟುತ್ತದೆ. ದೇವರು ಅವನ ನಿರ್ವಂಶ ಮಾಡಲಿ, ಅವನು ನರಕಕ್ಕೆ ಹೋಗಲಿ" ಎನ್ನುತ್ತಿದ್ದಾನೆ ಎಂದ ಕೆಲಸದವ.

ಎಂದೂ ದೇವಾಲಯಕ್ಕೆ ಬಾರದೆ ಇದ್ದ, ದೇವರಿಗೆ ಕೈ ಮುಗಿಯದೇ ಇದ್ದ ಚೋಂಗ ಯಾಕೆ ದೇವಸ್ಥಾನ ಆವರಣ ಪ್ರವೇಶಿಸಿ ಗರ್ಭ ಗುಡಿ ಎದುರಿಗೆ ಸಾಷ್ಟಾಂಗ ಎರಗಿದ? ಅಲ್ಲಿ ನೆರೆದಿದ್ದ ಎಲ್ಲರಿಗೂ ಈಗ ಪರಿಸ್ಥಿತಿ ಅರಿವಾಗಿದೆ. ಕಟ್ಟುಗಳ ಬಿಚ್ಚಿಸಿಕೊಂಡ ಆತ ಹತ್ತಾರು ಹೆಜ್ಜೆಗಳು ನಡೆದು ಗೇಟನ್ನು ದಾಟಿ ಒಮ್ಮೆ ಹಿಂತಿರುಗಿ ನೋಡಿದ. ತನ್ನನ್ನೆ ನೋಡುತ್ತಿದ್ದ ಜನಗಳ ಮುಖದಲ್ಲಿ ಈಗ ಕರುಣೆಯ ಭಾವ.

ಈ ಸುದ್ದಿ ಅಲ್ಲಿಗೆ ನಿಲ್ಲಲಿಲ್ಲ. ಅದು ಹೇಗೋ ಟೀವಿ, ವಾಟ್ಸಾಪ್, ಫೇಸ್ಬುಕ್ಕು ಪ್ರವೇಶಿಸಿದೆ. ನದಿಗೆ ವಿಷ, ಸತ್ತ ದೇವರ ಮೀನುಗಳು, ವ್ಯಕ್ತಿಯೊಬ್ಬನ ದೇವಸ್ಥಾನ ಪ್ರವೇಶ, ಅಶುದ್ಧವಾಯಿತೆಂದು ಅವನನ್ನು ಕಟ್ಟಿ ಹಾಕಿ ಹೊಡೆದ ಪರಿ, ತೆಂಗಿನ ಮರದಲ್ಲಿ ಬಿಗಿದು ಕಟ್ಟಿದ ವ್ಯಕ್ತಿಯ ದಯಾನೀಯ ಪರಿಸ್ಥಿತಿಯ ಭಾವಚಿತ್ರ, ಆತ ಶಾಪ ಹಾಕಿ ಹೇಳಿದ ಮಾತುಗಳು ಎಲ್ಲವೂ ಊರು, ದೇಶ ಗಡಿಗಳ ದಾಟಿದೆ. ಲಕ್ಷಾಂತರ ಮಂದಿ ಅದನ್ನು ಗಮನಿಸಿ ದೇವಸ್ಥಾನ ಆಡಳಿತ ಕಮಿಟಿಗೆ, ರಾಜ್ಯದ ಜಲಮಾಲಿನ್ಯ ಮಂಡಳಿಗೆ, ಅರಣ್ಯ ಇಲಾಖೆ, ಪೊಲೀಸ್ ವ್ಯವಸ್ಥೆಗೆ ಛೀಮಾರಿ ಹಾಕುತ್ತಿದ್ದಾರೆ. ರಾಜ್ಯ ಸರಕಾರದ ಕಾರ್ಯದರ್ಶಿಗಳು ತಕ್ಷಣ ಡಿ.ಸಿ. ಸಾಹೇಬರಿಗೆ ವಿಷಯದ ವಿವರಣೆ ಕೋರಿ ಇ–ಮೇಲ್ ರವಾನಿಸಿದ್ದಾರೆ. ಸಂಬಂಧಪಟ್ಟ ವ್ಯಕ್ತಿಗಳನ್ನು ಬಂಧಿಸಲು ಪೊಲೀಸ್ ಇಲಾಖೆಗೆ ಆದೇಶ ಬಂದಿದೆ. ರಂಪಾಟಗಳನ್ನು ಗಮನಿಸಿದ ಮುಜುರಾಯಿ ಇಲಾಖೆಯ ಸಚಿವರು ಪತ್ರಿಕಾಗೋಷ್ಠಿ ಕರೆದು ಆಗಲೇ ಘಟನಾವಳಿಗಳನ್ನು ಖಂಡಿಸಿದ್ದಾರೆ.



ಸರಕಾರದ ಎಣಿಕೆಗೂ ನಿಲುಕದ ಪ್ರತಿಕ್ರಿಯೆಗಳು ರಾಜ್ಯದಾದ್ಯಂತ ಶುರುವಾಗಿದೆ. ದಲಿತ ಸಂಘಟನೆಗಳು, ಪ್ರಗತಿಪರ ಸಂಸ್ಥೆಗಳ ಜೊತೆಗೂಡಿ ಪ್ರತಿಭಟನೆಗೆ ಕರೆಕೊಟ್ಟಿದ್ದಾರೆ. ಇಕ್ಕಟ್ಟಿಗೆ ಸಿಲುಕಿದ ಸರಕಾರ ಡಿ.ಸಿ.ಯವರನ್ನು ಚೋಂಗ ಇದ್ದಲ್ಲಿಗೆ ಕಳುಹಿಸಿಕೊಟ್ಟರು. ಸುಸ್ತಾಗಿ ಮಲಗಿದ್ದ ಚೋಂಗನಿಗೆ ಯಾರೋ ಕೂಗಿ ಕರೆದ್ದು ಕೇಳಿ ಎಚ್ಚರವಾಯಿತು. ಗುಡಿಸಲ ಹೊರಗೆ ಬಂದರೆ ಐದಾರು ಜನ ನಿಂತಿದ್ದರು. ಅವರು ಕೇಳಿದ ಪ್ರಶ್ನೆಗೆ ಹೆದರಿ ತಡವರಿಸಿಕೊಂಡು ಉತ್ತರಿಸಿದ. ಅವರೆಲ್ಲ ಹೊರಟು ಹೋಗುವವರಿದ್ದರು. ಹೆಣ್ಣುಮಗಳೊಬ್ಬಳು ಅವನ ಹತ್ತಿರ ಬಂದು ಬಿಕ್ಕಳಿಸುತ್ತಿದ್ದ ಅವನ ಕಿವಿಯಲ್ಲಿ 'ನಾಳೆ ಬೆಳಿಗ್ಗೆ ಕಾರು ತರುತ್ತೇನೆ. ಪೇಟೆಗೆ ಬರತೀಯಾ...' ಎಂದು ಕೇಳಿದ್ದಾಳೆ. ಒಮ್ಮೆ ಅವಳ ಕಡೆ ದಿಟ್ಟಿಸಿ ನೋಡಿ ತಲೆ ಅಲ್ಲಾಡಿಸಿ ಒಪ್ಪಿಗೆಯಿತ್ತ. ಜಾಹ್ನವಿ ಮನದಲ್ಲೇ ನಾಳೆ ಪತ್ರಿಕಾಗೋಷ್ಠಿ ಕರೆಯುವುದೆಂದು ತೀರ್ಮಾನಿಸುತ್ತಾ "ಬೆಳಿಗ್ಗೆ ನಾನೇ ಬರುತ್ತೇನೆ" ಎಂದವಳೇ ದಡಬಡನೆ ಹೊರಟು ಅಲ್ಲಿದ್ದವರ ಜೊತೆ ಸೇರಿದರೆ, ಡಿ.ಸಿ. ಸಾಹೇಬರು ಕಾರಲ್ಲೇ ಕುಳಿತು ಸರಕಾರಕ್ಕೆ ಸಲ್ಲಿಸಬೇಕಾಗಿದ್ದ ವರದಿ ಕುರಿತಂತೆ ಪೊಲೀಸ್ ಇಲಾಖೆ ಅಧಿಕಾರಿಗಳ ಜತೆ ಚರ್ಚಿಸುತ್ತಿದ್ದಾರೆ. ಜಾಹ್ನವಿ, ನಾಳೆ ಎಲ್ಲವನ್ನು ಇವರ ವರದಿಗಿಂತ ಮೊದಲೇ ಬಯಲಾಗಿಸುವೆ ಎಂದು ಎಣಿಕೆ ಹಾಕುತ್ತಿದ್ದಳು. ಆ ನದಿ, ನೀರು, ಮೀನುಗಳ ಯಾತನಾಮಯ ಸಾವು ಎಲ್ಲವೂ ಆಕೆಯಲ್ಲಿನ ತಾಯ್ತನವ ಬಡಿದೆಬ್ಬಿಸಿದೆ. ಈ ಗೋಷ್ಠಿ ಜಗಕೆ ಪಾಠವಾಗಬೇಕೆಂದಾಗಿ ಆಕೆ ನಿರ್ಧರಿಸಿದಂತಿತ್ತು. ಮಾರನೇ ದಿನ ಆಕೆ ಚೋಂಗನ ಪುಟ್ಟ ಗುಡಿಸಲಿನ ಅಂಗಳದಲ್ಲಿದ್ದಳು.

ಬದುಕಿನ ಸುದೀರ್ಘ ಅನುಭವಗಳ ಹೇಳುತ್ತಾ ಹೇಳುತ್ತಾ ಚೋಂಗನ ಮಾತುಗಳು ನಿಧಾನವಾಗಿ, ಆತ ಮೆಲ್ಲಗೆ ಜಾಹ್ನವಿಯನ್ನು ಕಣ್ಸನ್ನೆಯಿಂದಲೇ ಕರೆದು "ನದಿ ಕಡೆಗೆ ಹೋಗುವ'' ಎಂದ. ಜಾಹ್ನವಿ ವಿಷಯವನ್ನು ಎಲ್ಲರಿಗೂ ಕೇಳುವಂತೆ ಎತ್ತರದ ಸ್ವರದಲ್ಲಿ ಹೇಳಿ ಕಾರಿನತ್ತ ನಡೆದಳು. ಚೋಂಗನ ಕೈ ಹಿಡಿದು ತನ್ನ ಕಾರಿನಲ್ಲಿ ಕುಳ್ಳಿರಿಸುತ್ತಿದ್ದಂತೆ, ಸಿಡುಕು ಮುಖದೊಂದಿಗೆ ಡ್ರೈವರ್ ಹೊರಟ. ಒಂದಷ್ಟು ಜನ ಕಾರು ಬೈಕುಗಳಲ್ಲಿ ಹಿಂಬಾಲಿಸಿ ಐದಾರು ಕಿ.ಮೀ. ಕ್ರಮಿಸಿ ಹೊಳೆ ಬದಿ ಸೇರಿದ್ದಾರೆ. ನದಿ ಕಂಡ ಕೂಡಲೆ ಚೋಂಗ ಚಿಕ್ಕ ಹುಡುಗನಂತೆ ಜಿಗಿದು ಓಡಿದ. ಸದಾ ಹರಿಯುತ್ತಿದ್ದ ಆ ನದಿ ಈಗ ತುಂಡುತುಂಡಾದಂತೆ ಕಂಡುಬರುತ್ತಿತ್ತು. ಅದರ ಮೈ ಉದ್ದಕ್ಕೂ ಮರಳ ರಾಶಿ, ಮಧ್ಯೆ ಮಧ್ಯೆ ಒಂದಕ್ಕೊಂದು ಸಂಪರ್ಕವೇ ಇರದ ನೀರ ಗುಂಡಿಗಳು. ಚೋಂಗನ ಮುಖ ಬಾಡಿದಂತಿತ್ತು.

ಜಾಹ್ನವಿ "ಅಲ್ಲ, ನಾನೇನು ಮಾಡಬೇಕು ಹೇಳು" ಎಂದಾಗ, ನಡುಗುತ್ತಿದ್ದ ಆ ನರಪೇತಲದಂತಿದ್ದವ ಜಾಹ್ನವಿಯ ಕೈ ಹಿಡಿದು "ಹೊಳೆಗೆ ಇಳಿಸಿದ ಆನೆ ಸೊಂಡಿಲುಗಳನ್ನು ಮೇಲಕ್ಕೆ ಎತ್ತಿ ಹಾಕಿ" ಎಂದ. ಅಷ್ಟೊತ್ತಿಗೆ ಆತ ಕುಸಿದು ಬಿದ್ದ. ಜಾಹ್ನವಿ ಡ್ರೈವರ್‌ಗೆ "ನೀರು ತಾ" ಎಂದು ಜೋರಾಗಿ ಕೂಗಿ ಹೇಳುತ್ತಾ, ಅವನನ್ನು ಜೊತೆಗಾರರ ಸಹಕಾರದೊಂದಿಗೆ ಕಾರಿನತ್ತ ಎತ್ತಿ ಸಾಗಿದಳು.

ಇದೆಲ್ಲಾ ಆಗಿ ಎರಡೋ ಮೂರೋ ದಿನ ಕಳೆದಿದೆ. ನದಿಯಲ್ಲಿ ಮತ್ತೆ ನೀರು ಹರಿಯುತ್ತಿದೆ. ಹೊಂಡಗಳೆಲ್ಲಾ ಒಂದಕ್ಕೊಂದು ಜೋಡಣೆಯಾಗುತ್ತಾ ನದಿ ಪೂರ್ಣವಾಗಿದೆ. ಒಂದು ಮುಂಜಾವು ಮೂಡಣ ಕೆಂಪಾಗುವ ಹೊತ್ತು, ಆಗಷ್ಟೆ ಮಂಜು ಸುರಿಯಲಾರಂಭಿಸಿದೆ. ಮಂಜಿನೆಡೆಯಿಂದ ತೂರಿ ಬರುವ ಬಿಸಿಲ ಕೋಲಿನ ನರ್ತನ, ಕಾಜಾಣ ಹಕ್ಕಿಯ ಸಿಳ್ಳೆಯ ಸ್ವರದೊಂದಿಗೆ ಬೆರೆತ ನೀರ ಹರಿವಿನ ಜುಳು ಜುಳು ನಾದವು ನದಿಯ ಇಕ್ಕೆಲಗಳ ತುಂಬುತಿತ್ತು.

ಪ್ರತಿಕ್ರಿಯಿಸಿ: feedback@sudha.co.in